# A

**18218** **120 MINUTES**

1. ಪಿ.ಕೆ.ಪರಮೇಶ್ವರನ್ ನಾಯರ್ ಅವರ 'ಮಲಯಾಳ ಸಾಹಿತ್ಯ ಚರಿತ್ರೆ'ಯನ್ನು ಕನ್ನಡಕ್ಕೆ ಅನುವಾದಿಸಿರುವರು ಯಾರು?
   A) ಕಯ್ಯಾರ ಕಿಞ್ಞಣ್ಣರೈ B) ವೆಂಕಟರಾಜ ಪುಣಿಂಚತ್ತಾಯ
   C) ವಿ.ಗೋಪಾಲಕೃಷ್ಣ D) ಸಿ.ರಾಘವನ್

2. "ನುಡಿಯಂ ಛಂದದೊಳೊಂದಿರೆ ತೊಡರ್ಚಲಜೀವಾತನಾತನಿಂದಂ ಜಾಣಂ" ಈ ಪದ್ಯದ ಸಾಲುಗಳು ಕಂಡುಬರುವ ಕೃತಿ.
   A) ಕವಿರಾಜಮಾರ್ಗ B) ಛಂದೋಂಬುಧಿ
   C) ಶಬ್ದಮಣಿದರ್ಪಣ D) ಛಂದಸ್ಸಾರ

3. ಇವುಗಳಲ್ಲಿ ಗುಂಪಿಗೆ ಸೇರದಿರುವುದು ಯಾವುದು?
   A) ಜೈಮಿನಿಭಾರತ B) ಜಗನ್ನಾಥ ವಿಜಯ
   C) ಚೆನ್ನಬಸವಪುರಾಣ D) ಶ್ರೀರಾಮ ಪಟ್ಟಾಭಿಷೇಕ

4. ಕೆಳಗೆ ಕೊಟ್ಟಿರುವ ಕೃತಿಗಳ ಮುಂದೆ ಕರ್ತೃಗಳ ಹೆಸರು ಕೊಡಲಾಗಿದೆ. ಅವುಗಳಲ್ಲಿ ಸರಿಯಾದುದ್ದನ್ನು ಗುರುತಿಸಿರಿ.
   1) ಮಲ್ಲಿನಾಥ ಪುರಾಣ : 2ನೆಯ ಗುಣವರ್ಮ
   2) ಮುದ್ರಾಮಂಜೂಷ : ಕೆಂಪುನಾರಾಯಣ
   3) ವಿವೇಕ ಚಿಂತಾಮಣಿ : ಕುಮುದೇಂದು
   4) ರಸರತ್ನಾಕರ : ಸಾಳ್ವ
   ಸರಿಯಾದ ಉತ್ತರ :

   A) 1 ಮತ್ತು 2 B) 2 ಮತ್ತು 3 C) 3 ಮತ್ತು 4 D) 2 ಮತ್ತು 4

5. 'ಬಿಟ್ಟೆನೆಂದಡೆ ಬಿಡದೀ ಮಾಯೆ ಬಿಡದಿದ್ದರೆ ಬೆಂಬತ್ತಿತ್ತು ಮಾಯೆ' ಈ ವಚನದ ಕರ್ತೃ
   A) ಅಲ್ಲಮಪ್ರಭು B) ಚೆನ್ನಬಸವಣ್ಣ C) ಅಕ್ಕಮಹಾದೇವಿ D) ಸಿದ್ಧರಾಮ

6. 'ಮುಕ್ತಾಯಕ್ಕ'ನ ವಚನಗಳ ಅಂಕಿತ ಯಾವುದು?
   A) ಅಜಗಣ್ಣಾ B) ಮಾರೇಶ್ವರಾ C) ಧಾರೇಶ್ವರ D) ಉರಿಲಿಂಗದೇವ

7. ಈ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ?
   A) ಭಾಗ್ಯದ ಲಕ್ಷ್ಮೀ ಬಾರಮ್ಮ : ಶ್ರೀಪಾದರಾಯ
   B) ಸಕಲಗ್ರಹಬಲ ನೀನೇ ಸರಿಜಾಕ್ಷ : ಪುರಂದರದಾಸ
   C) ದೇವಿ ನಮ್ಮ ದ್ಯಾವರು ಬಂದರು ಬನ್ನಿರೆ ನೋಡಬನ್ನಿರೆ : ವ್ಯಾಸರಾಯ
   D) ಆಡಿದನೋ ರಂಗ ಅದ್ಭುತದಿಂದಲಿ : ಕನಕದಾಸ

8. ‘ಶಿವತತ್ತ್ವಚಿಂತಾಮಣಿ’ ಕೃತಿಯನ್ನು ರಚಿಸಿದವರು

A) ಭಾಸ್ಕರ B) ಶಿಶುಮಾಯಣ

C) ಚಿಕದೇವರಾಜ D) ಲಕ್ಕಣ್ಣದಂಡೇಶ

9. ಶ್ರೀಪತಿಗೆಸೊಬಗನುಡುಪತಿಗೆ ಶಾಂತಿಯನು
ವಾಣೀಪತಿ ಚಾತುರ್ಯಮಂ ದಿವಸ್ಪತಿಗೆಪ್ರ
ತಾಪಮುಂ ಸುರಪತಿಗೆಭೋಗಮಂ
ಈ ಪದ್ಯಭಾಗದಿಂದ ಆರಂಭವಾಗುವ ಕೃತಿ ಯಾವುದು?

A) ಕರ್ಣಾಟ ಭಾರತ ಕಥಾಮಂಜರಿ B) ಹರಿಶ್ಚಂದ್ರಕಾವ್ಯ

C) ಭರತೇಶ ವೈಭವ D) ಕೃಷ್ಣರಾಜ ಭಾರತ

10. ಇವುಗಳಲ್ಲಿ ಹೊಂದಿಕೆಯಾಗದ ಜೋಡಿಯನ್ನು ಗುರುತಿಸಿರಿ.
1. ವಿದ್ಯುಚ್ಚೋರ ರಿಸಿಯ ಕಥೆ : ವಡ್ಡಾರಾಧನೆ
2. ನೀಲಾಂಜನೆ ನೃತ್ಯ ಪ್ರಸಂಗ : ಆದಿಪುರಾಣ
3. ಚಂಡಶಾಸನ ಪ್ರಸಂಗ : ಅಜಿತನಾಥ ಪುರಾಣ
4. ಕೃಷ್ಣ–ಬಾಣೂರಮಲ್ಲರ ಪ್ರಸಂಗ : ಚಾಮುಂಡರಾಯ ಪುರಾಣ

ಸರಿಯಾದ ಉತ್ತರ :

A) 1 ಮತ್ತು 2 B) 2 ಮತ್ತು 3 C) 2 ಮತ್ತು 4 D) 3 ಮತ್ತು 4

11. ಇವುಗಳಲ್ಲಿ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿರುವ ಕೃತಿ ಯಾವುದು?

A) ಪ್ರಭುಲಿಂಗಲೀಲೆ B) ಯಶೋಧರಚರಿತೆ

C) ಗೀತಗೋಪಾಲ D) ಹದಿಬದೆಯಧರ್ಮ

12. ದ್ರಾವಿಡ ಭಾಷೆಗಳನ್ನು ಕುರಿತು ಕ್ರಮಬದ್ಧವಾದ ಅಧ್ಯಯನಕ್ಕೆ ಅಡಿಪಾಯ ಹಾಕಿದ ವಿದ್ವಾಂಸ ಯಾರು?

A) ರ್‍ಯಾಸ್‌ಮಸ್ಕ್‌ರಾಸ್ B) ಫ್ರಾನ್ಸಿಸ್ ವೈಟ್ ಎಲ್ಲಿಸ್

C) ಶ್ರೀರಂಗಪಟ್ಟಣದ ಕೃಷ್ಣಮಾಚಾರಿ D) ಕಾಲ್ಡ್‌ವೆಲ್

13. 1. ಮ್, ನ್, ಣ್, ಙ್, ಞ್ ಈ ಧ್ವನಿಮಾಗಳನ್ನು ಪ್ರಧಾನ ಅನುನಾಸಿಕ ಧ್ವನಿಮಾ ಗೌಣ ಅನುನಾಸಿಕ ಧ್ವನಿಮಾಗಳೆಂದೂ ಎರಡು ವಿಧವಾಗಿ ವಿಂಗಡಿಸಬಹುದು.
2. ಅನುಸ್ವಾರವನ್ನು ಸ್ವತಂತ್ರಧ್ವನಿಮಾ ಆಗಿ ಪರಿಗಣಿಸಲೇಬೇಕು.

A) ಒಂದನೆ ಹೇಳಿಕೆ ತಪ್ಪು ಎರಡನೆ ಹೇಳಿಕೆ ಸರಿ

B) ಒಂದನೆ ಹೇಳಿಕೆ ಸರಿ ಎರಡನೆ ಹೇಳಿಕೆ ತಪ್ಪು

C) ಎರಡೂ ಹೇಳಿಕೆಗಳೂ ತಪ್ಪು

D) ಎರಡೂ ಹೇಳಿಕೆಗಳೂ ಸರಿ

14. ಇವುಗಳಲ್ಲಿ ಕೇಶಿರಾಜ ಖೇದಭಾವಕ್ಕೆ ಕೊಟ್ಟಿರುವ ಪ್ರಯೋಗ ಯಾವುದು?
A) ಆನೆಯೊ ಅದ್ರಿಯೊ B) ಏನೇನೋ ಓದಿನ ಪರಿ ಲೇಸು ಲೇಸು
C) ಸಿಂಗಮಕ್ಕೆಮ ಅಂಜೆಂ D) ಅಯ್ಯೋ ಅಕ್ಕಟಾ ಇಂದ್ರಂಗೆ ಕೇಡಾಯ್ತೇ

15. 'ಊರುಳ್', 'ಕಟ್ಟಿಪ್ಪಿನುಳ್' ಇಲ್ಲಿರುವ ಪ್ರತ್ಯಯಗಳು ಕನ್ನಡ ಭಾಷೆಯ ಯಾವ ಹಂತಕ್ಕೆ ಸೇರಿವೆ?
A) ಹಳಗನ್ನಡ B) ಪೂರ್ವದ ಹಳಗನ್ನಡ
C) ನಡುಗನ್ನಡ D) ಹೊಸಗನ್ನಡ

16. ಕನ್ನಡ ಮತ್ತು ಸಂಸ್ಕೃತ ಪದ ಸೇರಿಸಿ ಮಾಡುವ ಸಮಾಸ
A) ಅಂಶಿ ಸಮಾಸ B) ಗಮಕ ಸಮಾಸ
C) ದ್ವಂದ್ವ ಸಮಾಸ D) ಅರಿ ಸಮಾಸ

17. ಇದು ಉತ್ತಮ ಪುರುಷ ಸರ್ವನಾಮ
A) ನಾನು B) ನೀನು C) ತಾನು D) ಅವಳು

18. 'ಬಡತನ' ಎಂಬ ಪದವು
A) ಧಾತು B) ಕೃದಂತ C) ತದ್ಧಿತಾಂತ D) ಅವ್ಯಯ

19. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ?
A) ಹಣ್ಣು ಹಂಪಲು ತಲೆಶಿರೋಭಾರ– ಇವು ದ್ವಿರುಕ್ತಿ ಪದಗಳು
B) ಸರಸರ, ದಬದಬ– ಇವು ಜೋಡಿನುಡಿಗಳು
C) ಬಾನಾಡಿ ಸಾಬೂನು– ಇವು ದೇಶ್ಯ ಪದಗಳು
D) ಸಾಲಸೋಲ ಮಕ್ಕಳುಮರಿ– ಇವು ಅನುಕರಣಾವ್ಯಯಗಳು

20. 'ಹಣ್ಣನ್ನು ತಿಂದೆನು' ಇದು ಒಂದು
A) ಸಾಮಾನ್ಯ ವಾಕ್ಯ B) ಮಿಶ್ರ ವಾಕ್ಯ
C) ಸಂಯೋಜಿತ ವಾಕ್ಯ D) ಗೌಣ ವಾಕ್ಯ

21. 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ' ಇದು ಯಾರ ಕೃತಿ.
A) ರಾ.ಯ.ಧಾರವಾಡಕರ B) ಎಚ್.ಎಸ್.ಬಿಳಿಗಿರಿ
C) ಕೆ.ಕೆಂಪೇಗೌಡ D) ಡಿ.ಎನ್.ಶಂಕರಭಟ್ಟ

22. 'ದ್ವಿವಚನ' ಯಾವ ಭಾಷೆಯಲ್ಲಿ ಪ್ರಧಾನವಾಗಿ ಕಂಡುಬರುತ್ತದೆ"?
A) ಕನ್ನಡ B) ಪ್ರಾಕೃತ C) ಸಂಸ್ಕೃತ D) ಇಂಗ್ಲಿಷ್

23. "ಪದಗಳೆಂಬ ನಾಣ್ಯಗಳ ಮೂಲಕ ನಮ್ಮೊಳಗಿನ ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗುವ ಸಾಧನವೇ ಭಾಷೆ" ಎಂದು ಹೇಳಿದವರು
A) ಎಬ್ಬಿಂಗ್ ಹಾಸ್ B) ಕ್ವಿಲ್ಲರ್ ಕಾಚ್
C) ಯಾಕೊಬ್‌ಕೋರ್ಗ D) ಬ್ಲಾಕ್ ಮತ್ತು ಟ್ರಾಗರ್

24. ಇಲ್ಲಿನ ಯಾವ ಪದಗಳು ಹೀನಾರ್ಥಕ್ಕೆ ಉತ್ತಮ ಉದಾಹರಣೆಯಾಗಿವೆ?

A) ಇಬ್ಬನಿ ಮತ್ತು ಹಿತ್ತಲು  B) ಬಾಗಿಲು ಮತ್ತು ಉಡುಗೊರೆ

C) ನಿಪ್ಪೊಸತು ಮತ್ತು ಹೊಸ್ತಿಲು  D) ಆಳು ಮತ್ತು ಗಾಳಿ

25. ಕೇಶಿರಾಜನ ಪ್ರಕಾರ ಕನ್ನಡದಲ್ಲಿ ಎಷ್ಟು ಸರ್ವನಾಮಗಳಿವೆ?

A) ಎಂಟು  B) ಒಂಬತ್ತು  C) ಆರು  D) ಹತ್ತು

26. 'ನಾಮಿನೀಕರಣ' ಎಂದರೆ?

A) ಗಿಡ್ಡನೆಯ ಗುಣವನ್ನು ಹೇಳುವ ನಾಮಪದಗಳು

B) ತರತಮಭಾವ ವ್ಯಕ್ತಪಡಿಸಲು ಸಾಧ್ಯವಾಗುವ ರೂಪಗಳು

C) ಮೂಲತಃ ನಾಮಪದಗಳಲ್ಲದ ಪದಗಳನ್ನು ನಾಮಪದಗಳನ್ನಾಗಿಸುವುದು

D) ಅಲ್ಪಡು ಪ್ರತ್ಯಯವನ್ನು ಹತ್ತಿಸಿಕೊಂಡುಬರುವುದು

27. ಯಾವ ಭಾಷೆಗಳಲ್ಲಿ 'ಮಾನವೇತರ' ಅಂದರೆ 'ಅಮಹತ್' ವರ್ಗದಲ್ಲಿ ಬಹುವಚನ ಪ್ರತ್ಯಯಗಳಿಲ್ಲದಿರುವುದು ಮೂಲದ್ರಾವಿಡದ ಪ್ರಮುಖ ಲಕ್ಷಣ ಎನಿಸಿದೆ?

A) ಕೋತ ಮತ್ತು ತೋದ  B) ಕುಡುಬ್ ಮತ್ತು ಮಲ್ತೊ

C) ಪರ್ಜಿ ಮತ್ತು ನಾಯ್ಕಿ  D) ಕೊಡಗು ಮತ್ತು ತುಳು

28. ಪೆಟ್ಟದುಳ್> ಬೆಟ್ಟದಲ್ಲಿ; ವಿಟ್ಟರ್> ಬಿಟ್ಟರು; ವಾಚಿಸು> ಬಾಜಿಸು ಇಲ್ಲಿ ನಡೆದಿರುವ ವ್ಯತ್ಯಾಸವೇನು?

A) ಅರ್ಥವ್ಯತ್ಯಾಸ  B) ಧ್ವನಿಪರಿವರ್ತನೆ

C) ಮೂಲಧ್ವನಿಯ ಪ್ರತಿಬಿಂಬ  D) ಸಾಮ್ಯಮೂಲ ವ್ಯತ್ಯಾಸ

29. ಮುದಲ್> ಮೊದಲ್; ಕುಡು> ಕೊಡು ಇಲ್ಲಿ ನಡೆದಿರುವ ಭಾಷಿಕ ವ್ಯತ್ಯಾಸವೇನು?

A) ಅ>ಏ ವ್ಯತ್ಯಯ  B) ಇ>ಎ ಸ್ವರ ವ್ಯತ್ಯಯ

C) ಉ>ಒ ಸ್ವರ ವ್ಯತ್ಯಯ  D) ಆದಿಸ್ವರ ಲೋಪ

30. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ?

A) ಬೆಳ್ಪು, ಇಂಪು, ತಣ್ಪು : ಸಮಾಸ ಪದಗಳು

B) ಕರ್ರನೆ, ತೆಳ್ಳನೆ, ಬೆಳ್ಳನೆ : ಕ್ರಿಯಾ ವಿಶೇಷಣಗಳು

C) ಕಿರುಗುಟ್ಟು ಗುರುಗಟ್ಟು : ಸಂಬಂಧಸೂಚಕ ಪ್ರತ್ಯಯಗಳು

D) ಮಾಡಿಸು, ನೋಡಿಸು : ಅಕರ್ಮಕ ಕ್ರಿಯಾಪದಗಳು

31. 'ಕನ್ನಡದಲ್ಲಿ ಭಾವಗೀತೆ'ಇದು ಯಾರ ಸಂಶೋಧನ ಗ್ರಂಥ.

A) ಹಂಪನಾ  B) ಕುಶಾಲಪ್ಪಗೌಡ

C) ಪ್ರಭುಶಂಕರ  D) ಎಸ್.ಅನಂತನಾರಾಯಣ

32. ಕೇಶಿರಾಜನ 'ಶಬ್ದಮಣಿದರ್ಪಣ'ವನ್ನು ಮೊತ್ತಮೊದಲಿಗೆ ಸಂಪಾದಿಸಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ.

A) ಜಾನ್‌ಗ್ಯಾರೆಟ್ B) ಬಿ.ಎಲ್.ರೈಸ್

C) ಥಾಮಸ್ ಹಡ್ಸನ್ D) ಜೆ.ಸ್ಟೀವನ್ಸನ್

33. ಕನ್ನಡ ಗ್ರಂಥ ಸಂಪಾದನೆಯ ಕ್ಷೇತ್ರಕ್ಕೆ ಮಹತ್ತ್ವದ ಕೊಡುಗೆ ನೀಡಿರುವ ಪಾಶ್ಚಾತ್ಯ ವಿದ್ವಾಂಸರುಗಳನ್ನು ಕಾಲಾನುಕ್ರಮದಲ್ಲಿ ಗುರುತಿಸಿರಿ.

A) ಹರ್ಮನ್ ಮೊಗ್ಲಿಂಗ್, ಜೀ ವುರ್ತ್, ಬಿ.ಎಲ್.ರೈಸ್, ಫರ್ಡಿನೆಂಡ್ ಕಿಟ್ಟೆಲ್

B) ಜೀ ವುರ್ತ್, ಹರ್ಮನ್ ಮೊಗ್ಲಿಂಗ್, ಫರ್ಡಿನೆಂಡ್ ಕಿಟ್ಟೆಲ್, ಬಿ.ಎಲ್.ರೈಸ್

C) ಬಿ.ಎಲ್.ರೈಸ್, ಫರ್ಡಿನೆಂಡ್ ಕಿಟ್ಟೆಲ್, ಹರ್ಮನ್ ಮೊಗ್ಲಿಂಗ್, ಜೀ ವುರ್ತ್

D) ಫರ್ಡಿನೆಂಡ್ ಕಿಟ್ಟೆಲ್, ಬಿ.ಎಲ್.ರೈಸ್, ಜೀ ವುರ್ತ್, ಹರ್ಮನ್ ಮೊಗ್ಲಿಂಗ್

34. "ಜ್ಞಾನದ ಅಭಿವೃದ್ಧಿಗೆ, ಪ್ರಗತಿಯ ಸಾಧನೆಗೆ ತನ್ನ ಸುತ್ತಲಿನ ಪರಿಸರದೊಂದಿಗೆ ನಿಕಟ ಸಂಪರ್ಕ ಹೊಂದಲು ತನ್ನ ಉದ್ದೇಶಗಳ ಸಫಲತೆಗೆ ಮತ್ತು ಸಮಸ್ಯೆಗಳ ಪರಿಹಾರಕ್ಕೆ ಸಂಶೋಧನೆ ಅತಿಮುಖ್ಯ ಸಾಧನ". ಇದು ಯಾರ ಹೇಳಿಕೆ?

A) ವೆಬ್‌ಸರ್ B) ಶಾಮಾನಂದ ಕಿಶೋರ್

C) ಜಾರ್ಜ್ ಜೆ. ಮೌಲಿ D) ಮುಳಿಯ ತಿಮ್ಮಪ್ಪಯ್ಯ

35. ಇವುಗಳಲ್ಲಿ ಸರಿಯಾದುದ್ದನ್ನು ಗುರುತಿಸಿರಿ.

1. ಕೆ.ಜಿ.ಕುಂದಣಗಾರ : ಪ್ರಾಚೀನ ಕನ್ನಡ ನಾಡಿನ ನಾಣ್ಯ ಪದ್ಧತಿ
2. ಕೆ.ವಿ.ರಾಘವೇಂದ್ರರಾವ್ : ಪಂಪಭಾರತ ದೀಪಿಕೆ
3. ಜಿ.ಎಸ್.ಶಿವರುದ್ರಪ್ಪ : ಸೌಂದರ್ಯ ಸಮೀಕ್ಷೆ
4. ಕೆ.ಜಿ.ನಾರಾಯಣ ಪ್ರಸಾದ್ : ಹೊಸಗನ್ನಡ ಅರುಣೋದಯ

ಸರಿಯಾದ ಉತ್ತರ :

A) 1 ಮತ್ತು 3 B) 3 ಮತ್ತು 4 C) 1 ಮತ್ತು 2 D) 2 ಮತ್ತು 4

36. 'ವಚನಶಾಸ್ತ್ರಸಾರ' ಈ ಕೃತಿಯ ಸಂಪಾದಕರು ಯಾರು?

A) ಎಸ್.ಎಸ್.ಬಸವನಾಳ B) ಆರ್.ಸಿ.ಹಿರೇಮಠ

C) ಜೆ.ನಂದೀಮಠ D) ಫ.ಗು.ಹಳಕಟ್ಟಿ

37. 1. ಆಲೋಚನಾ ಶಕ್ತಿ ಮತ್ತು ಔಚಿತ್ಯ ಪ್ರಜ್ಞೆಗಳು ಸಂಶೋಧಕನಿಗೆ ಅನಾವಶ್ಯಕ.
2. ಸಂಶೋಧನೆ ಬಹಳಷ್ಟು ಸಲ ಅಲ್ಪವಿರಾಮ ಅರ್ಧವಿರಾಮಗಳ ಮೂಲಕ ಪೂರ್ಣ ವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ.

A) ಮೊದಲ ಹೇಳಿಕೆ ಸರಿ ಎರಡನೆಯ ಹೇಳಿಕೆ ತಪ್ಪು

B) ಮೊದಲ ಹೇಳಿಕೆ ತಪ್ಪು ಎರಡನೆಯ ಹೇಳಿಕೆ ಸರಿ

C) ಎರಡೂ ಹೇಳಿಕೆಗಳು ತಪ್ಪು

D) ಎರಡೂ ಹೇಳಿಕೆಗಳು ಸರಿ

38. ಇವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿರಿ.

A) ಸಂಶೋಧನೆ : ಬಿ.ವ್ಹಿ.ಶಿರೂರ

B) ಸಂಶೋಧನೆ ವ್ಯಾಸಂಗ : ಚಂದ್ರಪೂಜಾರಿ

C) ಸಾಹಿತ್ಯ ಸಂಶೋಧನ ಮಾರ್ಗ : ಸಂಗಮೇಶ ಸವದತ್ತಿಮಠ

D) ಕನ್ನಡ ಸಂಶೋಧನಶಾಸ್ತ್ರ : ಎಂ.ಮರಿಯಪ್ಪಭಟ್ಟ

39. ಇವುಗಳಲ್ಲಿ ಯಾವ ಜೋಡಿ ಸರಿಯಾಗಿ ಹೊಂದುವುದಿಲ್ಲ?

1. ನಾಡೋಜ ಪಂಪ : ಗೋವಿಂದಪೈ
2. ಕೆಲವು ಕನ್ನಡ ಕವಿಗಳ ಕಾಲ ವಿಚಾರ : ಎ.ವೆಂಕಟಸುಬ್ಬಯ್ಯ
3. ಸಂಶೋಧನ ತರಂಗ : ಆರ್.ಶೇಷಶಾಸ್ತ್ರೀ
4. ಸಾಹಿತ್ಯ ವಿರಾಟ್ ಸ್ವರೂಪ : ದ.ರಾ.ಬೇಂದ್ರೆ

ಸರಿಯಾದ ಉತ್ತರ :

A) 1 ಮತ್ತು 2 B) 2 ಮತ್ತು 4 C) 3 ಮತ್ತು 4 D) 1 ಮತ್ತು 3

40. ಪ್ರಾಚೀನ ಕನ್ನಡ ಕಾವ್ಯಗಳನ್ನು ಸಂಪಾದಿಸಿಕೊಟ್ಟಿರುವ ಸಂಪಾಕರುಗಳ ಹೆಸರಿನ ಮುಂದೆ ಸಂಪಾದಿತ ಕೃತಿಗಳ ಹೆಸರನ್ನು ಕೊಡಲಾಗಿದೆ. ಇವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿರಿ.

1. ಆರ್.ನರಸಿಂಹಾಚಾರ್ : ಕಾವ್ಯಾವಲೋಕನ
2. ಟಿ.ಎಸ್.ವೆಂಕಣ್ಣಯ್ಯ : ಗದಾಯುದ್ಧ ಸಂಗ್ರಹ
3. ಜಿ.ವರದರಾಜರಾವ್ : ಹರಿಹರನ ರಗಳೆಗಳು
4. ಎಲ್.ಬಸವರಾಜು : ಅಲ್ಲಮನ ವಚನ ಚಂದ್ರಿಕೆ

ಸರಿಯಾದ ಉತ್ತರ :

A) 1 ಮತ್ತು 4 B) 2 ಮತ್ತು 3 C) 3 ಮತ್ತು 4 D) 2 ಮತ್ತು 4

41. 'ಪಾಠಾಂತರ ಸಂಕಲನ' ಎಂದರೆ

A) ಎಲ್ಲ ಪ್ರತಿಗಳ ಪಾಠಾಂತರಗಳನ್ನು ಒಂದು ಪ್ರತಿಯಲ್ಲಿ ಒಟ್ಟಾಗಿ ಕೂಡಿಸುವುದು

B) ಪ್ರತಿ ಪ್ರತಿಗಳ ಪಾಠಾಂತರಗಳನ್ನು ಬೇರೆ ಬೇರೆಯಾಗಿ ಸಂಕಲಿಸುವುದು

C) ಎಲ್ಲ ಪ್ರತಿಗಳ ಪಾಠಾಂತರಗಳನ್ನು ಹೊಸದಾಗಿ ಪರಿಷ್ಕರಿಸುವುದು

D) ಎಲ್ಲ ಪ್ರತಿಗಳ ಪಾಠಾಂತರಗಳನ್ನು ಗುರುತಿಸಿಕೊಂಡು ಇಲ್ಲದ್ದನ್ನು ಪ್ರತಿಯಿಂದಲೇ ತೆಗೆದುಹಾಕುವುದು

42. 'ಕನ್ನಡ ಗ್ರಂಥ ಸಂಪಾದನಶಾಸ್ತ್ರ' ಈ ಗ್ರಂಥದ ಕರ್ತೃ ಯಾರು?

A) ಡಿ.ಎಲ್.ನರಸಿಂಹಾಚಾರ್ B) ಬಿ.ಎಸ್.ಸಣ್ಣಯ್ಯ

C) ಆರ್.ಶ್ಯಾಮಶಾಸ್ತ್ರಿ D) ಎಂ.ಎಂ.ಕಲಬುರ್ಗಿ

43. 'ನಂಬಿಯಣ್ಣನ ರಗಳೆ' ಕೃತಿಯನ್ನು ಮೊದಲಿಗೆ ಸಂಪಾದಿಸಿಕೊಟ್ಟವರು ಯಾರು?
A) ತೀ.ನಂ.ಶ್ರೀಕಂಠಯ್ಯ B) ಎ.ಆರ್.ಕೃಷ್ಣಶಾಸ್ತ್ರೀ
C) ಎಚ್.ಶೇಷಯ್ಯಂಗಾರ್ D) ಭೂಸನೂರಮಠ

44. ಭಾರತದ ಮೊದಲ ಭಾಷಾ ಪತ್ರಿಕೆ ಯಾವುದು?
A) ಸಮಾಚಾರ ದರ್ಪಣ B) ಮಂಗಳೂರು ಸಮಾಚಾರ
C) ಅಮೃತ ಬಜಾರ ಪತ್ರಿಕಾ D) ಕಬಂದ ಕೌಮುದಿ

45. 'ಮೈಸೂರು ಗಜೆಟ್' ಎಂಬ ವಾರ ಪತ್ರಿಕೆಯ ಮೊದಲ ಸಂಪಾದಕರು
A) ಜೆ.ಮ್ಯಾಕ್ B) ಎನ್.ರಿಕೆಟ್
C) ಬಿ.ಹರ್ಮನ್ ರೈಸ್ D) ಜೆ.ಸಿ.ಮಾರ್ಷ್‌ಮನ್

46. 'ಸೀತೆಯ ಮುಖಕಮಲ ಅರಳಿತು' ಈ ವಾಕ್ಯದಲ್ಲಿ ಬಳಕೆಯಾಗಿರುವ ಅಲಂಕಾರ ಯಾವುದು?
A) ದೃಷ್ಟಾಂತಾಲಂಕಾರ B) ಉಪಮಾಲಂಕಾರ
C) ಉತ್ಪ್ರೇಕ್ಷಾಲಂಕಾರ D) ರೂಪಕಾಲಂಕಾರ

47. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಹೊಂದುವುದಿಲ್ಲ
A) ತಿರುಮಲೆ ತಾತಾಚಾರ್ಯ ಶರ್ಮ : ವಿಶ್ವ ಕರ್ನಾಟಕ
B) ಡಿ.ವಿ.ಜಿ. : ಜೀವನ
C) ಪಿ.ಆರ್.ರಾಮಯ್ಯ : ತಾಯಿನಾಡು
D) ಯು.ಆರ್.ಅನಂತಮೂರ್ತಿ : ರುಜುವಾತು

48. ಮೊತ್ತಮೊದಲ ಬಾರಿಗೆ ಕಂಪ್ಯೂಟರ್ ಮೌಸ್ ರೂಪಿಸಿದವರು
A) ಡಗ್ಲಾಸ್ ಎಂಗೆಲ್‌ಬಾರ್ಟ್ B) ಬಿಲ್‌ಗೇಟ್ಸ್
C) ಚಾರ್ಲ್ಸ್‌ಬ್ಯಾಬೇಜ್ D) ನಾರಾಯಣಮೂರ್ತಿ

49. ವಿದ್ಯುನ್ಮಾನ ಪುಸ್ತಕಗಳನ್ನು ಓದಲಿಕ್ಕೆಂದೇ ತಯಾರಾದ ವಿಶೇಷ ಉಪಕರಣ ಯಾವುದು?
A) ಟ್ಯಾಬ್ಲೆಟ್ B) ಸ್ಕ್ಯಾನರ್ C) ಇ–ಬುಕ್ D) ರ್‍ಯಾಮ

50. ಕಂಪ್ಯೂಟರಿನ ಯಾವ ಭಾಗವನ್ನು ಅದರ ಜ್ಞಾಪಕಶಕ್ತಿ ಎಂದು ಕರೆಯಬಹುದು?
A) ಮೆಮರಿ B) ಕಂಟ್ರೋಲ್ ಯೂನಿಟ್
C) ಔಟ್‌ಪುಟ್ D) ಇನ್‌ಪುಟ್

51. ಅನಪೇಕ್ಷಿತವಾಗಿ ಬರುವ ಇ–ಮೇಲ್ ಸಂದೇಶಗಳನ್ನು ಏನೆಂದು ಗುರುತಿಸುತ್ತೇವೆ?
A) ವೈರಸ್ B) ವರ್ಮ್ C) ಮೌಸ್ D) ಸ್ಪಾಮ್

52. ‘ಜನವಾಣಿ ಬೇರು ಕವಿವಾಣಿ ಹೂ’ ಇದು ಯಾರ ಹೇಳಿಕೆ?

A) ಮಾಸ್ತಿ ವೆಂಕಟೇಶ ಅಯ್ಯಂಗಾರ್

B) ಬಿ.ಎಂ.ಶ್ರೀ

C) ಬೆಟಗೇರಿ ಕೃಷ್ಣಶರ್ಮ

D) ದ.ರಾ.ಬೇಂದ್ರೆ

53. ಜನಪ ಕಥೆಗಳನ್ನು “ಕಿನ್ನರ ಕಥೆಗಳು, ದೈನಂದಿನ ಕಥೆಗಳು, ಪ್ರಾಣಿ ಕಥೆಗಳು” ಎಂದು ಮೂರು ವಿಧಗಳಾಗಿ ವಿಂಗಡಿಸಿದ ವಿದ್ವಾಂಸ ಯಾರು?

A) ವನ್‌ಡೋರ ಲೇನ

B) ಸ್ಟಿತ್ ಥಾಂಸನ್

C) ಮಿಲ್ಲರ್

D) ಎಡ್ವಿನ್ ಸಿಡ್ನಿ ಹಾರ್ಟ್‌ಲ್ಯಾಂಡ್

54. 1. ಒಗಟು ಸಾಹಿತ್ಯ ಸಂಸ್ಕೃತಿಗಳ ಜೀವನಾಡಿ. ಭಾಷೆಯಿಲ್ಲದೆ ಸಂಸ್ಕೃತಿಗಳಿಗೆ ನೆಲೆ ಬೆಲೆಗಳೇ ಇಲ್ಲ.

2. ಬುದ್ಧಿ ಭಾವನೆಗಳನ್ನು ಅತ್ಯುತ್ತಮ ಮಟ್ಟದಲ್ಲಿ ಬೆಳೆಸಿಕೊಂಡು ಬಂದ ಒಗಟು ಜನಪದ ಸಾಹಿತ್ಯ ರೂಪಗಳ ಪೈಕಿ ಇತ್ತೀಚಿನ ಸೃಷ್ಟಿ.

A) ಎರಡೂ ಹೇಳಿಕೆಗಳೂ ತಪ್ಪು

B) ಎರಡೂ ಹೇಳಿಕೆಗಳೂ ಸರಿ

C) ಒಂದನೆ ಹೇಳಿಕೆ ಸರಿ, ಎರಡನೆ ಹೇಳಿಕೆ ತಪ್ಪು

D) ಒಂದನೆ ಹೇಳಿಕೆ ತಪ್ಪು ಎರಡನೆ ಹೇಳಿಕೆ ಸರಿ

55. ಇವುಗಳಲ್ಲಿ ‘ಅಲನ್ ಡಂಡಸ್’ ಅವರ ಸಂಪಾದಿತ ಕೃತಿ ಯಾವುದು?

A) ದಿ ಸ್ಟಡಿ ಆಫ್ ಫೋಕಲೋರ್

B) ದಿ ಸ್ಟಾಂಡರ್ಡ್ ಡಿಕ್ಷನರಿ ಆಫ್ ಫೋಕಲೋರ್ ಮೈಥೋಲಾಜಿ ಅಂಡ್ ಲೆಜೆಂಡ್

C) ಫೋಕಲೋರ್ ಅಂಡ್ ಫೋಕ್‌ಲೈಫ್

D) ಫೋಕಲೋರ್ ಜನ್‌ರೆಸ್

56. ಇವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿರಿ.

1. ಇಂಡೋ–ಯುರೋಪಿಯನ್ ಸಿದ್ಧಾಂತ : ವಿಲ್‌ಹೆಲ್ಮ್‌ಗ್ರಿಮ್

2. ಭಾರತೀಯ ಮೂಲ ಸಿದ್ಧಾಂತ : ಮ್ಯಾಕ್ಸ್‌ಮುಲ್ಲರ್

3. ಸ್ವಪ್ನಮೂಲ ಸಿದ್ಧಾಂತ : ಫೆಡರಿಕ್ ವಾನಡರ್ ಲೀನ್

4. ಚಾರಿತ್ರಿಕ ಭೌಗೋಳಿಕ ಸಿದ್ಧಾಂತ : ಥಿಯೋಡಾರ್ ಬೆನ್ಫೆ

ಸರಿಯಾದ ಉತ್ತರ :

A) 1 ಮತ್ತು 2 B) 2 ಮತ್ತು 3 C) 3 ಮತ್ತು 4 D) 1 ಮತ್ತು 3

57. ಇವುಗಳಲ್ಲಿ ಬ್ರಿಟಿಷರ 'ನಿಶ್ಶಸ್ತ್ರೀಕರಣ ಕಾಯ್ದೆ' ವಿರುದ್ಧದ ದಂಗೆಯನ್ನು ಬಣ್ಣಿಸುವ ಲಾವಣಿ ಯಾವುದು?

A) ಸಂಗೊಳ್ಳಿ ರಾಯಣ್ಣನ ದಂಗೆ
B) ಆದಾಯ ತೆರಿಗೆ
C) ಕಿತ್ತೂರ ಚೆನ್ನಮ್ಮನ ಸೊಸೆ
D) ಹಲಗಲಿಯ ಬೇಡರು

58. ಕನ್ನಡದ ಮೊತ್ತಮೊದಲ ಜನಪದ ಗೀತೆಗಳ ಸಂಕಲನ ಯಾವುದು?

A) ಗರತಿಯ ಹಾಡು
B) ಹಳ್ಳಿಯ ಹಾಡುಗಳು
C) ಜನಪದ ಗೀತಾಂಜಲಿ
D) ಕೆರೆಗೆ ಹಾರ

59. 'Folklore' ಎಂಬುದಕ್ಕೆ ಕನ್ನಡದಲ್ಲಿ 'ಜಾನಪದ' ಎಂದು ನಾಮಕರಣ ಮಾಡಿ ಅದನ್ನು ವೈಜ್ಞಾನಿಕವಾಗಿ ಹಾಗೂ ಖಚಿತವಾಗಿ ನಿರೂಪಿಸಿದವರು ಯಾರು?

A) ಕ.ರಾ.ಕೃ
B) ಜೀ.ಶಂ.ಪರಮಶಿವಯ್ಯ
C) ಹಾ.ಮಾ.ನಾಯಕ
D) ಬಿ.ಎಸ್.ಗದ್ದಗಿಮಠ

60. "ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ.................."
ಈ ಗಾದೆ ಯಾವ ಮಾತಿನಿಂದ ಪೂರ್ಣವಾಗುತ್ತದೆ?

A) ದೇಶವಿಲ್ಲ
B) ಬಂಗಾರವೆಲ್ಲ
C) ಜಗಳವಿಲ್ಲ
D) ಗೆಲುವೇ ಎಲ್ಲ

61. "ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯ ಪರಿಚಯಮುಂ ಕವಿತೆಗೆ ಕಾರಣಂ" ಇದು ಯಾರ ಹೇಳಿಕೆ.

A) ಕೇಶಿರಾಜ
B) ಎರಡನೆಯ ನಾಗವರ್ಮ
C) ಒಂದನೆಯ ನಾಗವರ್ಮ
D) ಭಟ್ಟಾಕಳಂಕ

62. ಭಟ್ಟನಾಯಕನ 'ಭುಕ್ತಿವಾದ'ವನ್ನು ಖಂಡಿಸಿ 'ಅಭಿವ್ಯಕ್ತಿವಾದ'ವನ್ನು ಪ್ರತಿಪಾದಿಸಿದವ

A) ಭಟ್ಟಲೊಲ್ಲಟ
B) ಶ್ರೀಶಂಕುಕ
C) ಆನಂದವರ್ಧನ
D) ಅಭಿನವಗುಪ್ತ

63. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ.

1. ಭರತ : ಶಬ್ದಾರ್ಥಸಹಿತೌ ಕಾವ್ಯಂ
2. ಭಾಮಹ : ರೀತಿರಾತ್ಮಕಾವ್ಯಸ್ಯ
3. ವಿಶ್ವನಾಥ : ವಾಕ್ಯಂ ರಸಾತ್ಮಕಂ ಕಾವ್ಯಂ
4. ಜಗನ್ನಾಥ : ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ

ಸರಿಯಾದ ಉತ್ತರ :

A) 1 ಮತ್ತು 2  B) 2 ಮತ್ತು 3  C) 3 ಮತ್ತು 4  D) 1 ಮತ್ತು 4

64. ಇವುಗಳಲ್ಲಿ ಕಾಲಾನುಕ್ರಮದಲ್ಲಿ ಸರಿಯಾದುದ್ದನ್ನು ಗುರುತಿಸಿರಿ.
- A) ಟಿ.ಎಸ್. ಎಲಿಯಟ್, ಐ.ಎ.ರಿಚರ್ಡ್ಸ್, ಸಿ.ಡಿ.ಲುವೀಸ್, ಎಡ್ವರ್ಡ್ ಬುಲ್ಲೋ
- B) ಎಡ್ವರ್ಡ್ ಬುಲ್ಲೋ, ಟಿ.ಎಸ್. ಎಲಿಯಟ್, ಐ.ಎ.ರಿಚರ್ಡ್ಸ್, ಸಿ.ಡಿ.ಲುವೀಸ್
- C) ಐ.ಎ.ರಿಚರ್ಡ್ಸ್, ಟಿ.ಎಸ್. ಎಲಿಯಟ್, ಎಡ್ವರ್ಡ್ ಬುಲ್ಲೋ, ಸಿ.ಡಿ.ಲುವೀಸ್
- D) ಸಿ.ಡಿ.ಲುವೀಸ್, ಎಡ್ವರ್ಡ್ ಬುಲ್ಲೋ, ಟಿ.ಎಸ್. ಎಲಿಯಟ್, ಐ.ಎ.ರಿಚರ್ಡ್ಸ್

65. "ಏಕೋ ರಸಃ ಕರುಣ ಏವ....." ಇದು ಯಾರ ಹೇಳಿಕೆ.

A) ಕಾಳಿದಾಸ B) ಭವಭೂತಿ C) ಭಟ್ಟನಾರಾಯಣ D) ಭಾಸ

66. ರಚನೆಯ ಕಾಲಾನುಕ್ರಮಕ್ಕನುಗುಣವಾಗಿ ಸರಿಯಾದುದನ್ನು ಗುರುತಿಸಿರಿ.
- A) ಕಾವ್ಯಾದರ್ಶ, ಕಾವ್ಯಮೀಮಾಂಸೆ, ಕಾವ್ಯಾನುಶಾಸನ, ಕಾವ್ಯಾಲಂಕಾರಸಾರ ಸಂಗ್ರಹ
- B) ಕಾವ್ಯಮೀಮಾಂಸೆ, ಕಾವ್ಯಾದರ್ಶ, ಕಾವ್ಯಾಲಂಕಾರಸಾರ ಸಂಗ್ರಹ, ಕಾವ್ಯಾನುಶಾಸನ
- C) ಕಾವ್ಯಾನುಶಾಸನ, ಕಾವ್ಯಾಲಂಕಾರಸಾರ ಸಂಗ್ರಹ, ಕಾವ್ಯಾದರ್ಶ, ಕಾವ್ಯಮೀಮಾಂಸೆ
- D) ಕಾವ್ಯಾದರ್ಶ, ಕಾವ್ಯಾಲಂಕಾರಸಾರ ಸಂಗ್ರಹ, ಕಾವ್ಯಮೀಮಾಂಸೆ, ಕಾವ್ಯಾನುಶಾಸನ

67. "ಆದರ್ಶ ಸಾಮ್ರಾಜ್ಯದಿಂದ ಕವಿಗಳನ್ನು ಹೊರಹಾಕಬೇಕು" ಎನ್ನುವುದು ಯಾರ ವಾದ.

A) ಪ್ಲೇಟೋ B) ಅರಿಸ್ಟಾಟಲ್ C) ಸಾಕ್ರೇಟಿಸ್ D) ಹೊರೇಸ್

68. ಅಲಂಕಾರಗಳನ್ನು 'ಶಬ್ದಾಲಂಕಾರ' ಮತ್ತು 'ಅರ್ಥಾಲಂಕಾರ' ಎಂದು ಎರಡು ರೀತಿಯಲ್ಲಿ ಮೊದಲು ವಿಭಾಗಿಸಿಕೊಂಡು ಪ್ರತಿಪಾದಿಸಿದ ಆಲಂಕಾರಿಕ.

A) ಅಪ್ಪಯ್ಯದೀಕ್ಷಿತ B) ರುದ್ರಟ
C) ಜಗನ್ನಾಥ D) ರುಯ್ಯಕ

69. "ತೀವ್ರವಾದ ಭಾವಗಳ ಸಹಜವಾದ ಹೊರಹೊಮ್ಮುವಿಕೆಯೇ ಕಾವ್ಯ" ಇದು ಯಾರ ಹೇಳಿಕೆ.

A) ವರ್ಡ್ಸ್‌ವರ್ತ್ B) ಕೋಲರಿಜ್
C) ಷೆಲ್ಲಿ D) ಸಾಮ್ಯುಯಲ್ ಜಾನ್ಸನ್

70. "ಧ್ವನಿಯೆನಿಸಿದಳಂಕಾರ ಧ್ವನಿಯೆಸೆವಿನಮೆಸುವುದಲ್ಲಿ ಮಧುರವಿ ಪಂಚೀ
ಧ್ವನಿಯೊಡನನೇಕರಾಗ ಧ್ವನಿಯನೆ ಸೊಗಯಿಸುವುದು ಕಿನ್ನರಧ್ವನಿ ನಗದೊಳ್"
ಈ ಪದ್ಯ ಕಂಡುಬರುವ ಕೃತಿ

A) ಕವಿರಾಜಮಾರ್ಗ B) ಆದಿಪುರಾಣ
C) ಉದಿಯಾದಿತ್ಯಾಲಂಕಾರ D) ನೇಮಿನಾಥ ಪುರಾಣ

71. 'ವಕ್ರೋಕ್ತಿ' ಸಿದ್ಧಾಂತ ಪ್ರತಿಪಾದಕ

A) ಭಾಮಹ B) ಕ್ಷೇಮೆಂದ್ರ C) ಕುಂತಕ D) ದಂಡಿ

72. ಇವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿರಿ.

1. ಶಾಂತರಸದ ಮೊದಲ ಪ್ರತಿಪಾದಕ : ಉದ್ಭಟ
2. ಅದ್ಭುತರಸದ ಸ್ಥಾಯೀಭಾವ : ಭಯ
3. ಕವಿಸಮಯದ ಪ್ರತಿಪಾದಕ : ರಾಜಶೇಖರ
4. ವೀರರಸದ ಸ್ಥಾಯೀಭಾವ : ಕ್ರೋಧ

ಸರಿಯಾದ ಉತ್ತರ :

A) 1 ಮತ್ತು 2 B) 2 ಮತ್ತು 3 C) 3 ಮತ್ತು 4 D) 1 ಮತ್ತು 3

73. 'ರಾಚನಿಕ ಸಿದ್ಧಾಂತದ' ಪ್ರತಿಪಾದಕ

A) ವಿ.ಜೆ.ಪ್ರಾಪ್ B) ಪೇಯಿಂಟ್‌ವಸ್
C) ಅಲೆಕ್ಸಾಂಡರ್ ಎಚ್. ಕ್ರಾಪೆ D) ಪೀಟರ್ ಕ್ಲಾಸ್

74. ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಎಲ್ಲಿದೆ?

A) ರಾಮನಗರ B) ಉಡುಪಿ C) ಹಾಸನ D) ಮೂಡಿಗೆರೆ

75. 'ಬೊಳುಕಾಟ್' ಇದು ಈ ಕೆಳಗಿನ ಯಾರ ಜನಪ್ರಿಯ ನೃತ್ಯವಾಗಿದೆ?

A) ಕೊಡವ B) ಹೆಳವ C) ಗೊರವ D) ಮ್ಯಾಸಬೇಡ

76. 'ಹೊಟ್ಟೆ ತಣ್ಣಗಿರಲಿ' ಇದು ಒಂದು

A) ಪಡೆನುಡಿ B) ಜೋಡುನುಡಿ C) ಗಾದೆ D) ನುಡಿಗಟ್ಟು

77. ರಾಮಾಯಣದ ಕಥೆಗಳನ್ನು ಹೆಚ್ಚಾಗಿ ಆಯ್ಕೆಮಾಡಿಕೊಂಡು ಯಕ್ಷಗಾನ ಪ್ರಸಂಗಗಳನ್ನು ಮೊದಲು ರಚಿಸಿದ ಖ್ಯಾತಿ ಯಾರಿಗೆ ಸಲ್ಲುತ್ತದೆ?

A) ಬಿ.ಎಲ್.ರೈಸ್ B) ಪೀಟರ್.ಜೆ.
C) ಪಾರ್ತಿಸುಬ್ಬ D) ಬಿ.ಎ.ವಿವೇಕ ರೈ

78. ಜಯಕೀರ್ತಿ ಹೇಳಿರುವ ಕರ್ಣಾಟಕ ವಿಷಯ ಜಾತಿ ಛಂದಸ್ಸುಗಳು ಎಷ್ಟು?

A) ಎಂಟು B) ಒಂಬತ್ತು C) ಹತ್ತು D) ಹನ್ನೊಂದು

79. "ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ"
ಈ ಪದ್ಯ ಯಾವ ಛಂದಸ್ಸಿನಲ್ಲಿದೆ?

A) ಚಂಪಕಮಾಲೆ B) ಉತ್ಪಲಮಾಲೆ
C) ಮಲ್ಲಿಕಾಮಾಲೆ D) ಮಂದಾಕ್ರಾಂತ

80. ಇವುಗಳಲ್ಲಿ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿರುವ ಕೃತಿಗಳನ್ನು ಗುರುತಿಸಿರಿ.
1. ಸೂಕ್ತಿಸುಧಾರ್ಣವ 2. ತೊರವೆ ರಾಮಾಯಣ
3. ಪದ್ಮರಾಜಪುರಾಣ 4. ಚೆನ್ನಬಸವಪುರಾಣ
ಸರಿಯಾದ ಉತ್ತರ :
A) 1 ಮತ್ತು 3 B) 2 ಮತ್ತು 4 C) 1 ಮತ್ತು 2 D) 3 ಮತ್ತು 4

81. ಪಿರಿಯಕ್ಕರದ ಲಕ್ಷಣ ಇದು
A) ಬ್ರ.ವಿ.ವಿ.ವಿ.ವಿ.ವಿ.ರು B) ವಿ.ವಿ.ಬ್ರ.ವಿ.ವಿ.ಬ್ರ
C) ಬ್ರ.ವಿ.ವಿ.ವಿ.ರು D) ವಿ.ಬ್ರ.ವಿ.ಬ್ರ.ವಿ.ರು

82. "ಅಲ್ಲಿ ಸೊಗಯಿಸುವ ಕೃತಕ ಗಿರಿಗಳಿಂ
ಕಲ್ಪ ತರುಗಳನೆ ಪೋಲ್ವ ಮರಗಳಿಂ"
ಈ ಪದ್ಯ ಯಾವ ಛಂದಸ್ಸಿನಲ್ಲಿದೆ?
A) ಉತ್ಸಾಹ ರಗಳೆ B) ಮಂದಾನಿಲ ರಗಳೆ
C) ಲಲಿತ ರಗಳೆ D) ಸರಳ ರಗಳೆ

83. ಗಣವಿನ್ಯಾಸದಲ್ಲಿ ರುದ್ರಗಣ ಎಷ್ಟು ಬಗೆಗಳಿಂದ ಕೂಡಿರುತ್ತದೆ?
A) ನಾಲ್ಕು B) ಎಂಟು C) ಹದಿನಾರು D) ಇಪ್ಪತ್ತು

84. ಇವುಗಳಲ್ಲಿ ಗುಂಪಿಗೆ ಸೇರದ್ದು ಯಾವುದು?
A) ಕಂದ B) ತ್ರಿಪದಿ C) ಏಳೆ D) ಸಾಂಗತ್ಯ

85. ಇವುಗಳಲ್ಲಿ ತೀ.ನಂ.ಶ್ರೀ ಅವರ ಕೃತಿ ಯಾವುದು?
A) ಛಂದೋತರಂಗ B) ಹೊಸಗನ್ನಡ ಕವಿತೆಯ ಛಂದಸ್ಸು
C) ಕನ್ನಡ ಛಂದಸ್ಸು D) ಸಮಾಲೋಕನ

86. "ಜನ್ನನ ಸಂಪನ್ನವಾದ, ಸೂಕ್ಷ್ಮವಾದ ರೂಪಕಶಕ್ತಿ ಕಂದಪದ್ಯದ ರೂಪದಲ್ಲಿ ಹಸ್ತಿದಂತದಲ್ಲಿಯ ಕೆತ್ತನೆಯಂತೆ ಮೈದಾಳಿದೆ" ಇದು ಯಾರ ಹೇಳಿಕೆ.
A) ರಂ.ಶ್ರೀ ಮುಗಳಿ B) ಎಲ್.ಬಸವರಾಜು
C) ಡಿ.ಎಸ್.ಕರ್ಕಿ D) ತ.ಸು.ಶಾಮರಾಯ

87. 1. ಮಾನವಾತೀತ ಶಕ್ತಿಗಳ ಬಗೆಗಿರುವ ನಂಬಿಕೆಗಳೇ ಧರ್ಮ.
2. ಪ್ರಕೃತಿ ಮತ್ತು ಮಾನವರ ಬದುಕನ್ನು ನಿಯಂತ್ರಿಸುವ ಹಾಗೂ ನಿರ್ದೇಶಿಸುವ ಮಾನವಾತೀತ ಶಕ್ತಿಯಲ್ಲಿರುವ ನಂಬಿಕೆಯೇ ಧರ್ಮ.
A) ಎರಡೂ ಹೇಳಿಕೆಗಳು ತಪ್ಪು
B) ಎರಡೂ ಹೇಳಿಕೆಗಳು ಸರಿ
C) ಒಂದನೆಯ ಹೇಳಿಕೆ ಸರಿ ಎರಡನೆಯ ಹೇಳಿಕೆ ತಪ್ಪು
D) ಒಂದನೆಯ ಹೇಳಿಕೆ ತಪ್ಪು ಎರಡನೆಯ ಹೇಳಿಕೆ ಸರಿ

88. 'ಕಲ್ಚರ್ ಅಂಡ್ ಅನಾರ್ಕಿ' ಇದು ಯಾರ ಕೃತಿ

A) ಜೆ.ಜೆ.ಹರ್ಡೆರ್ B) ಜಾನ್ ಫ್ರೀಡ್ಸ್
C) ಇ.ಬಿ.ಟೈಲರ್ D) ಮ್ಯಾಥ್ಯೂ ಆರ್ನಾಲ್ಡ್

89. ಇವರುಗಳಲ್ಲಿ ಕನ್ನಡದ ಸಂಸ್ಕೃತಿ ಚಿಂತಕರಲ್ಲಿ ಪ್ರಮುಖರಾದವರು ಯಾರು?

1. ಆಲೂರು ವೆಂಕಟರಾಯರು 2. ಡಿ.ವಿ.ಗುಂಡಪ್ಪ
3. ಎಚ್.ತಿಪ್ಪೇರುದ್ರಸ್ವಾಮಿ 4. ಸಿ.ವೀರಣ್ಣ

ಸರಿಯಾದ ಉತ್ತರ :

A) 1, 2 ಮತ್ತು 3 B) 2, 3 ಮತ್ತು 4 C) 3, 4 ಮತ್ತು 1 D) 1, 2 ಮತ್ತು 4

90. ಕೆಳಗಿನವುಗಳಲ್ಲಿ ರಹಮತ್ ತರೀಕೆರೆ ಅವರ ಕೃತಿ ಯಾವುದು?

A) ಪ್ರತಿಸಂಸ್ಕೃತಿ B) ಸಂಸ್ಕೃತಿ C) ಸಂಸ್ಕೃತಿವಿಕಾಸ D) ಉಪಸಂಸ್ಕೃತಿ

91. "ಸಮೀಕ್ಷೆ" ಎಂಬ ಶಬ್ದಕ್ಕೆ ಸೂಕ್ತವಾದ ಅರ್ಥ.

A) ಅವಲೋಕನ B) ಅನಾವರಣ C) ಅಭಾದಿತ D) ಅಸಮಗ್ರ

92. ಸಿಂಗರಾರ್ಯನ ಮಿತ್ರಾವಿಂದ ಗೋವಿಂದ ನಾಟಕದ ಮೂಲ

A) ಭಾಸನ ಊರುಭಂಗ B) ಭಟ್ಟನಾರಾಯಣ ವೇಣೀಸಂಹಾರ
C) ಹರ್ಷನ ರತ್ನಾವಳಿ D) ಶೂದ್ರಕನ ಮೃಚ್ಛಕಟಿಕ

93. 'ಸೆರೆ' ಈ ಕಥೆಯ ಕರ್ತೃ

A) ಪೂರ್ಣಚಂದ್ರ ತೇಜಸ್ವಿ B) ಶಾಂತಿನಾಥ ದೇಸಾಯಿ
C) ಪಿ.ಲಂಕೇಶ D) ಯಶವಂತ ಚಿತ್ತಾಲ

94. ಇವುಗಳಲ್ಲಿ ಚಂದ್ರಶೇಖರ ಕಂಬಾರರ ನಾಟಕಗಳು ಯಾವುವು?

1. ಎಲ್ಲರಂಥವನಲ್ಲ ನನ ಗಂಡ 2. ಸಿರಿಸಂಪಿಗೆ
3. ಋಷ್ಯಶೃಂಗ 4. ಗೋಕರ್ಣದ ಗೌಡಶಾನಿ

ಸರಿಯಾದ ಉತ್ತರ :

A) 1 ಮತ್ತು 2 B) 2 ಮತ್ತು 3 C) 3 ಮತ್ತು 4 D) 1 ಮತ್ತು 4

95. 'ಹಿಮಗಿರಿಯ ಕಂದರ' ಇದು ಯಾರ ಕವನ ಸಂಕಲನ?

A) ವಿ.ಕೃ.ಗೋಕಾಕ್ B) ಬಿ.ಸಿ.ರಾಮಚಂದ್ರಶರ್ಮ
C) ಗೋಪಾಲಕೃಷ್ಣ ಅಡಿಗ D) ಎ.ಕೆ.ರಾಮಾನುಜನ್

96. ಕೆಳಗಿನ ಜೋಡಿಗಳಲ್ಲಿ ಪರಸ್ಪರ ಹೊಂದಿಕೆಯಾಗದಿರುವುದು ಯಾವುದು?

A) ತ್ರಿವೇಣಿ – ಬೆಳ್ಳಿಮೋಡ

B) ಅನುಪಮ ನಿರಂಜನ – ಫಣಿಯಮ್ಮ

C) ಗೀತಾ ನಾಗಭೂಷಣ – ಬದುಕು

D) ಸಾರಾ ಅಬೂಬಕರ್ – ಸುಳಿಯಲ್ಲಿ ಸಿಕ್ಕವರು

97. ಮಲೆಯಾಳಂನ ಲಲಿತಾಂಬಿಕ ಅಂತರ್ಜನಂ ಅವರ 'ಅಗ್ನಿಸಾಕ್ಷಿ' ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದವರು ಯಾರು?

A) ಕೆ.ಕೆ.ನಾಯರ್ B) ಅರ್ತಿಕಜೆ ಕೃಷ್ಣಭಟ್

C) ಸಿ.ಕೆ.ರಾಘವನ್ D) ಬಿ.ಕೆ.ತಿಮ್ಮಪ್ಪ

98. 'ನವ್ಯವಿಮರ್ಶೆ' ಇದು ಯಾರ ವಿಮರ್ಶಾ ಕೃತಿ?

A) ಗಿರಡ್ಡಿ ಗೋವಿಂದರಾಜ B) ಡಿ.ಆರ್.ನಾಗರಾಜ

C) ಎ.ಎಚ್.ರಾಘವೇಂದ್ರರಾವ್ D) ಜಿ.ಎಚ್.ನಾಯಕ

99. ಇವುಗಳಲ್ಲಿ ಐತಿಹಾಸಿಕ ನಾಟಕಗಳು ಯಾವುವು? ಗುರುತಿಸಿ.

1. ತಾಳಿಕೋಟೆ 2.ಗುಣಮುಖ 3.ಅಂಜುಮಲ್ಲಿಗೆ 4.ಶೋಕಚಕ್ರ

ಸರಿಯಾದ ಉತ್ತರ :

A) 1 ಮತ್ತು 4 B) 1 ಮತ್ತು 2 C) 2 ಮತ್ತು 3 D) 3 ಮತ್ತು 4

100. ಇವುಗಳಲ್ಲಿ ಪುತಿನ ಅವರ ಕೃತಿ ಇದು.

A) ಯುಗಸಂಧ್ಯಾ B) ಶ್ರೀಹರಿಚರಿತೆ C) ಚಕೋರಿ D) ಚಾರುವಸಂತ

101. ಷೇಕ್ಸ್‌ಪಿಯರ್‌ನ 'ಕಿಂಗ್‌ಲಿಯರ್' ನಾಟಕವನ್ನು ಕನ್ನಡಕ್ಕೆ 'ಹೇಮಚಂದ್ರರಾಜವಿಲಾಸ' ಎಂದು 1899ರ ವೇಳೆಗೆ ಅನುವಾದಿಸಿದವರು

A) ಎಂ.ಎಲ್. ಶ್ರೀಕಂಠೇಗೌಡ B) ಬಸವಪ್ಪಶಾಸ್ತ್ರೀ

C) ಎಂ.ಎಸ್.ಪುಟ್ಟಣ್ಣ D) ರಾಮಚಂದ್ರದೇವ

102. ಇವರುಗಳಲ್ಲಿ ಸಾಂಗತ್ಯ ಪ್ರಕಾರಕ್ಕೆ ಸೇರಿದ ಕವಿಗಳು ಯಾರು?

1. ಕನಕದಾಸ ಮತ್ತು ಹೆಳವನಕಟ್ಟೆ ಗಿರಿಯಮ್ಮ 2. ಚಂದ್ರರಾಜ ಮತ್ತು ಕರ್ಣಪಾರ್ಯ

3. ಭೀಮಕವಿ ಮತ್ತು ಚಾಟುವಿತಲನಾಥ 4. ನಂಜುಂಡ ಮತ್ತು ಗೋವಿಂದವೈದ್ಯ

ಸರಿಯಾದ ಉತ್ತರ :

A) 1 ಮತ್ತು 2 B) 1 ಮತ್ತು 4 C) 2 ಮತ್ತು 3 D) 3 ಮತ್ತು 4

103. ಇವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿರಿ.

A) ಗುಳವಾಡಿ ವೆಂಕಟರಾವ್ : ವಾಗ್ದೇವಿ

B) ಕೆರೂರು ವಾಸುದೇವಾಚಾರ್ಯ : ಚೋರಗ್ರಹಣತಂತ್ರ

C) ಮಿರ್ಜಿ ಅಣ್ಣರಾಯ : ಇಂದಿರೆ

D) ಗಳಗನಾಥ : ಮಾಧವಕರುಣಾವಿಲಾಸ

104. 'ದೇವರು ರುಜು ಮಾಡಿದನು' ಮತ್ತು 'ಇಂದ್ರದಿಗಂತದಿ' ಈ ಕವಿತೆಗಳು ಒಳಗೊಂಡಿರುವ ಕುವೆಂಪು ಅವರ ಕವನ ಸಂಕಲನ ಯಾವುದು?

A) ಕೊಳಲು B) ಪಾಂಚಜನ್ಯ

C) ಕಲಾಸುಂದರಿ D) ಪಕ್ಷಿಕಾಶಿ

105. 'ಹಳ್ಳ ಬಂತು ಹಳ್ಳ' ಇದು ಯಾರ ಕಾದಂಬರಿ.

A) ಶ್ರೀನಿವಾಸವೈದ್ಯ B) ಕುಂ.ವೀರಭದ್ರಪ್ಪ

C) ನಾ.ಮೊಗಸಾಲೆ D) ಕೆ.ಟಿ.ಗಟ್ಟಿ

106. ಇವುಗಳಲ್ಲಿ ಗುಂಪಿಗೆ ಸೇರದಿರುವುದು ಯಾವುದು?

A) ಅರಳು–ಮರಳು B) ಅಳಿದ ಮೇಲೆ

C) ಜೀವಧ್ವನಿ D) ಬಕುಲದ ಹೂಗಳು

107. ಕೆಳಗಿನ ಜೋಡಿಗಳಲ್ಲಿ ಪರಸ್ಪರ ಹೊಂದಿಕೆಯಾಗದಿರುವುದು ಯಾವುದು?

A) ಪೂರ್ಣಚಂದ್ರ ತೇಜಸ್ವಿ : ತಬರನ ಕಥೆ

B) ಜಯಂತ ಕಾಯ್ಕಿಣಿ : ಬಣ್ಣದ ಕಾಲು

C) ಮೊಗಳ್ಳಿ ಗಣೇಶ : ಕಪ್ಪುನೆಲದ ಕೆಂಪುಕಾಲು

D) ಬೋಳವಾರು ಮಹಮ್ಮದ್‌ಕುಞ್ಞಿ : ಆಕಾಶಕ್ಕೆ ನೀಲಿ ಪರದೆ

108. ಗಿರೀಶ ಕಾರ್ನಾಡ ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿರುವ ವರ್ಷ ಯಾವುದು?

A) 1990 B) 1994

C) 1998 D) 2010

109. ಇವುಗಳಲ್ಲಿ ಎಲ್.ಎಸ್.ಶೇಷಗಿರಿರಾವ್ ಅವರ ಕೃತಿ ಯಾವುದು?

A) ಯುಗಧರ್ಮ ಹಾಗೂ ಸಾಹಿತ್ಯದರ್ಶನ

B) ಇಂಗ್ಲಿಷ್ ಸಾಹಿತ್ಯ ಚರಿತ್ರೆ

C) ಅಲ್ಲಮಪ್ರಭು ಮತ್ತು ಶೈವಪ್ರತಿಭೆ

D) ಪಾಶ್ಚಾತ್ಯ ವಿಮರ್ಶೆಯ ಪ್ರಾಚೀನ ಪರಂಪರೆ

110. ಇವುಗಳಲ್ಲಿ ಸರಿಯಾದ ಜೋಡಿಗಳನ್ನು ಗುರುತಿಸಿರಿ.

1. ಬಸವಪ್ಪಶಾಸ್ತ್ರೀ : ಕರ್ಣಾಟಕ ಅಭಿಜ್ಞಾನ ಶಾಕುಂತಲ
2. ಕೈಲಾಸಂ : ಬಹಿಷ್ಕಾರ
3. ಚಂದ್ರಶೇಖರ ಪಾಟೀಲ : ಅಗ್ನಿ ಮತ್ತು ಮಳೆ
4. ಚಂದ್ರಕಾಂತ ಕುಸನೂರ : ಆನಿಬಂತಾನಿ

ಸರಿಯಾದ ಉತ್ತರ :

A) 1, 2 ಮತ್ತು 3 B) 1, 3 ಮತ್ತು 4
C) 2, 3 ಮತ್ತು 4 D) 1, 2 ಮತ್ತು 4

111. ಈ ಕೆಳಗಿನವುಗಳಲ್ಲಿ ಕಾಲಾನುಕ್ರಮಣಿಕೆಯಲ್ಲಿ ರಚನೆಗೊಂಡಿರುವ ಕೃತಿಗಳ ಸರಿಯಾದ ಸಾಲನ್ನು ಗುರುತಿಸಿರಿ.

A) ಭಾರತೀಯ ಕಾವ್ಯಮೀಮಾಂಸೆ, ತೌಲನಿಕ ಕಾವ್ಯಮೀಮಾಂಸೆ, ಪಾಶ್ಚಾತ್ಯ ಕಾವ್ಯಮೀಮಾಂಸೆ, ಕಾವ್ಯಾರ್ಥಚಿಂತನ
B) ಭಾರತೀಯ ಕಾವ್ಯಮೀಮಾಂಸೆ, ಪಾಶ್ಚಾತ್ಯ ಕಾವ್ಯಮೀಮಾಂಸೆ, ತೌಲನಿಕ ಕಾವ್ಯಮೀಮಾಂಸೆ, ಕಾವ್ಯಾರ್ಥಚಿಂತನ
C) ಭಾರತೀಯ ಕಾವ್ಯಮೀಮಾಂಸೆ, ಪಾಶ್ಚಾತ್ಯ ಕಾವ್ಯಮೀಮಾಂಸೆ, ಕಾವ್ಯಾರ್ಥಚಿಂತನ, ತೌಲನಿಕ ಕಾವ್ಯಮೀಮಾಂಸೆ
D) ಭಾರತೀಯ ಕಾವ್ಯಮೀಮಾಂಸೆ, ಕಾವ್ಯಾರ್ಥಚಿಂತನ, ತೌಲನಿಕ ಕಾವ್ಯಮೀಮಾಂಸೆ, ಪಾಶ್ಚಾತ್ಯ ಕಾವ್ಯಮೀಮಾಂಸೆ

112. ಇವುಗಳಲ್ಲಿ ರಾಮಾಯಣ ಮಹಾಭಾರತಗಳ ವಸ್ತುವನ್ನಾಧರಿಸಿ ರಚಿತವಾಗಿರುವ ಕಾದಂಬರಿಗಳು ಯಾವುವು?

1. ಸಂಸ್ಕಾರ 2. ಚಿರಸ್ಮರಣೆ 3. ವಿಮುಕ್ತಿ 4. ಪರ್ವ

ಸರಿಯಾದ ಉತ್ತರ :

A) 1 ಮತ್ತು 2 B) 2 ಮತ್ತು 3 C) 3 ಮತ್ತು 4 D) 1 ಮತ್ತು 4

113. 'ಪೆತ್ತಜಯನ್ ಮತ್ತು ಪೊಗಟಿಪಟ್ಟಣ' ಈ ಶಬ್ದಗಳು ಯಾವ ಶಾಸನದಲ್ಲಿ ಬಳಕೆಗೊಂಡಿದೆ?

A) ಬಾದಾಮಿ ಶಾಸನ B) ಹಲ್ಮಿಡಿ ಶಾಸನ
C) ಜುರಾ ಶಾಸನ D) ತಳಂಗೆರೆ ಶಾಸನ

114. ಕ್ರಿ.ಶ.1007 ರಲ್ಲಿ 'ಬ್ರಹ್ಮಜಿನಾಲಯ' ಎಂಬ ಜೈನಬಸದಿಯನ್ನು ನಿರ್ಮಿಸಿ, ಆ ಬಸದಿಯ ಪೂಜಾ ಕಾರ್ಯಗಳ ವೆಚ್ಚಕ್ಕೋಸ್ಕರ ಸುರುಕಿ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟ ವಿಷಯವನ್ನು ವಿವರಿಸುವ ಶಾಸನ ಯಾವುದು?

A) ಶ್ರವಣಬೆಳಗೊಳದ ಬುಕ್ಕರಾಯನ ಶಾಸನ
B) ಆತಕೂರು ಶಾಸನ
C) ಅತ್ತಿಮಬ್ಬೆಯ ಲಕ್ಕುಂಡಿ ಶಾಸನ
D) ದೇಕಬ್ಬೆಯ ಬೆಳತೂರು ಶಾಸನ

115. 1. ಭಾರತೀಯ ಶಾಸನಗಳ ಕಾಲನಿರೂಪಣೆಯಲ್ಲಿ ವಿಶೇಷವಾಗಿ ಬಳಕೆಗೊಂಡಿರುವ ಶಕಗಳೆಂದರೆ ವಿಕ್ರಮಶಕ ಮತ್ತು ಶಾಲಿವಾಹನ ಶಕ,
2. ಜಿನವಲ್ಲನ 'ಗಂಗಾಧರಂ ಶಾಸನ' ತೆಲುಗು ಭಾಷೆಯಲ್ಲಿ ಮಾತ್ರ ರಚಿತವಾಗಿದೆ.

A) ಮೊದಲನೆಯ ಹೇಳಿಕೆ ಸರಿ ಎರಡನೆಯ ಹೇಳಿಕೆ ತಪ್ಪು
B) ಮೊದಲನೆಯ ಹೇಳಿಕೆ ತಪ್ಪು ಎರಡನೆಯ ಹೇಳಿಕೆ ಸರಿ
C) ಎರಡೂ ಹೇಳಿಕೆಗಳೂ ತಪ್ಪು
D) ಎರಡೂ ಹೇಳಿಕೆಗಳೂ ಸರಿ

116. ಕರ್ನಾಟಕದಲ್ಲಿ ಶಾಸನಗಳ ಅಧ್ಯಯನಕ್ಕೆ ಮಹತ್ತ್ವದ ಕೊಡುಗೆ ನೀಡಿರುವ ಪಾಶ್ಚಾತ್ಯ ವಿದ್ವಾಂಸರುಗಳನ್ನು ಕಾಲಾನುಕ್ರಮವಾಗಿ ಸರಿಯಾದುದ್ದನ್ನು ಗುರುತಿಸಿರಿ.
A) ವಾಲ್ಟರ್ ಎಲಿಯಟ್, ಜೆ.ಎಫ್.ಫ್ಲೀಟ್, ಬಿ.ಎಲ್.ರೈಸ್, ಇ.ಹುಲ್ಷ್
B) ಜೆ.ಎಫ್.ಫ್ಲೀಟ್, ವಾಲ್ಟರ್ ಎಲಿಯಟ್, ಇ.ಹುಲ್ಷ್, ಬಿ.ಎಲ್.ರೈಸ್
C) ಬಿ.ಎಲ್.ರೈಸ್, ಜೆ.ಎಫ್.ಫ್ಲೀಟ್, ಇ.ಹುಲ್ಷ್, ವಾಲ್ಟರ್ ಎಲಿಯಟ್
D) ವಾಲ್ಟರ್ ಎಲಿಯಟ್, ಬಿ.ಎಲ್.ರೈಸ್, ಜೆ.ಎಫ್.ಫ್ಲೀಟ್, ಇ.ಹುಲ್ಷ್

117. "ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆಂಬ ಗರ್ವಮೆನಗಿಲ್ಲ" ಇದು ಯಾವ ಕವಿಯ ಹೇಳಿಕೆ.
A) ರನ್ನ B) ಪೊನ್ನ C) ಪಂಪ D) ನಾಗಚಂದ್ರ

118. 'ಕರ್ಣಾಟ ಭಾರತ ಕಥಾಮಂಜರಿ'ಯ ಯಾವ ಪರ್ವದಲ್ಲಿ ಉತ್ತರಕುಮಾರನ ಪ್ರಸಂಗ ಬರುತ್ತದೆ?
A) ಅರಣ್ಯಪರ್ವ B) ವಿರಾಟಪರ್ವ
C) ಉದ್ಯೋಗಪರ್ವ D) ಸಭಾಪರ್ವ

119. ಇಲ್ಲಿನ ಯಾವ ಕೃತಿಯ ಮೇಲೆ ಕಾಳಿದಾಸನ 'ಕುಮಾರಸಂಭವ'ದ' ಪ್ರಭಾವ ಕಂಡುಬರುತ್ತದೆ?
A) ಲೀಲಾವತಿ ಪ್ರಬಂಧ B) ಕಬ್ಬಿಗರಕಾವ
C) ಸೋಮನಾಥ ಚರಿತೆ D) ಗಿರಿಜಾಕಲ್ಯಾಣ

120. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ.
1. ದುರ್ಗಸಿಂಹ : ಕರ್ಣಾಟಕ ಕಾದಂಬರಿ 2. ನಯಸೇನ : ಸಮಯ ಪರೀಕ್ಷೆ
3. ಅಗ್ಗಳ : ಚಂದ್ರಪ್ರಭ ಪುರಾಣ 4. ಜನ್ನ : ವರ್ಧಮಾನ ಪುರಾಣ
ಸರಿಯಾದ ಉತ್ತರ :
A) 1, 2 ಮತ್ತು 3 B) 1, 3 ಮತ್ತು 4 C) 1, 2 ಮತ್ತು 4 D) 2, 3 ಮತ್ತು 4